ಶ್ರೀ ವಿ. ಮುನಿಯಪ್ಪ.—ಕಳೆದ 15 ವರ್ಷಗಳಿಂದ ತಾವು ಈ 467 ಎಕರೆ ಜಮೀನಿನ ಬಗ್ಗೆ ವಸೂಲ್ಮಾಡಿರತಕ್ಕ ಕಂದಾಯವನ್ನು ಆ ರೈತರಿಗೆ ಈಗ ರೀ ಫಂಡ್ ಮಾಡುವಂತೆ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಜಿ. ಬಸಪ್ಪ.—ರಸ್ತೆ ಕಾಮಗಾರಿ ಪೂರ್ತಿಯಾಗಿ 10-15 ವರ್ಷಗಳಾಗಿದ್ದರೂ, ಇನ್ನೂ ಅಕ್ಸ್‌ಜಿಷನ್ ಪ್ರೊಸೀಡಿಂಗ್ಸ್ ಪೂರ್ತಿಯಾಗದೇ ಇರುವಂಥ ನಿದರ್ಶನಗಳು ನಮ್ಮ ಸಂಸ್ಥಾನದಲ್ಲಿ ಎಷ್ಟಿರುತ್ತವೆ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಜಿ. ಬಸಪ್ಪ.—ಹೊಸದುರ್ಗ ಜಿಲ್ಲಾಬೋರ್ಡ್ ರಸ್ತೆ ವಿಚಾರದಲ್ಲಿ ಹೋದ ಬಡ್ಜೆಟ್ ಅಧಿವೇಶನದಲ್ಲಿ ಇದೇ ಸಭೆಯಲ್ಲಿ ಚರ್ಚೆಯಾಗಿ ಹೊಸದುರ್ಗ ತಾಲ್ಲೂಕಿನಲ್ಲಿ ಒಂದು ರಸ್ತೆಯಾಗಿ ಹನ್ನೆರಡು ವರ್ಷಗಳಾಗಿದ್ದರೂ ಇನ್ನೂ ಅಕ್ಸೆಪ್ಟೆಡ್ ಪ್ರೊಸೀಡಿಂಗ್ಸ್ ಪೂರೈಸಿಲ್ಲವೆಂಬುದು ತಮ್ಮ ಗಮನದಲ್ಲಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ನೋಟೀಸ್

Acquisition of lands in Survey Nos. 15, 17 and 18 of Mylnahalli Village to build Vasantapur Village.

Q.—501. Sri S. M. LINGAPPA (Krishnarajpet).—

Will the Government be pleased to state :—

(*a*) whether the villagers of Vasantapur in Krishnarajpet Taluk have requested Government to acquire the land situated in Survey Nos. 15, 17 and 18 belonging to Mylnahalli Village with a view to build their village on the said land ;

(*b*) if so, the action taken by Government in that behalf ?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) The Deputy Commissioner has been requested to forward the proposal to Government for sanction. There has been some delay as only a small part of the cost of acquisition has been credited by the Village Panchayet and the full amount not yet credited.

ಶ್ರೀ ಎಸ್. ಎಂ. ಲಿಂಗಪ್ಪ.—ತಮ್ಮ (ಎ) ಪ್ರಶ್ನೆಯ ಉತ್ತರಕ್ಕೆ ಅನುಸಾರವಾಗಿ ಅವರು ಖಜಾನೆಗೆ ಎಷ್ಟು ಕಣವನ್ನು ಪಾವತಿ ಮಾಡಿದ್ದಾರೆ ?

ಶ್ರೀ ಟಿ. ಚನ್ನಯ್ಯ.—ರೂ. 155-1-0.

ಶ್ರೀ ಎಸ್. ಎಂ. ಲಿಂಗಪ್ಪ.—ಸದರಿ ಗ್ರಾಮದವರು ಕ್ಯಾಜುಟೆರಿ ಅಲೋಯನ್ಸ್ ಮನ್ನಾ ಮಾಡಬೇಕೆಂದು ಸರ್ಕಾರಕ್ಕೆ ಮನವಿಯನ್ನೇನಾದರೂ ಸಲ್ಲಿಸಿದ್ದಾರೆಯೇ ?

Sri T. CHANNIAH.—Information is not available.

Layouts of Ramachandrapura and Errappa Blocks near Sriramapura and of Rajamahal and Upparahalli near Vasantapura in Bangalore City.

Q.—510. Sri V. R. NAIDU (Malleswaram).—

Will the Government be pleased to state :—

(*a*) whether they have approved of the layouts of Ramachandrapura and Errappa Blocks near Sriramapura and of Rajamahal and Upparahalli near Vasantanagar in Bangalore City ;

(*b*) if so, the reason for the delay in taking further steps ;

(*c*) the expenditure they will have to incur for these layouts ?

A.—Sri T. CHANNIAH (Minister for Public Health and Local Self-Government).—

(*a*) Schemes for the improvement of Ramachandrapura and Lakshminarayanapuram have been approved and of Rajamahal and Upparahalli near Vasanthapura are under consideration.

(*b*) The works in respect of which the schemes are approved could not be taken up owing to paucity of funds. It is now proposed to recover at least 75 per cent of the layout charges from the persons who are to benefit by these improvements. Preliminary surveys for this work have now commenced.

(*c*) For the improvement of Ramachandrapuram and Lakshminarayanpuram ; Rs. 19,24,900. For the improvement of Rajamahal and Upparahalli near Vasanthanagar : Rs. 12,18,000.

ಶ್ರೀ ವಿ. ಆರ್. ನಾಯ್ಡು.—(ಎ) ಪ್ರಶ್ನೆಗೆ ಉತ್ತರವಾಗಿ schemes have been approved ಎಂದು ಉತ್ತರ ಕೊಟ್ಟಿದ್ದೀರಿ. ಎಷ್ಟು ವರ್ಷಗಳ ಕೆಳಗೆ ಇದನ್ನು ತಾವು ಅನುಮೋದಿಸಿದ್ದು ?

ಶ್ರೀ ಟಿ. ಚನ್ನಯ್ಯ.—ತಾ। 20-11-51 ರಲ್ಲಿ.